# ಕರ್ನಾಟಕ ವಿಧಾನ ಪರಿಷತ್ತು

**ಸದಸ್ಯರ ಹೆಸರು** : **ಶ್ರೀ ಶರಣಗೌಡ ಬಯ್ಯಾಪುರ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ** : **893**

**ಉತ್ತರಿಸಬೇಕಾದ ದಿನಾಂಕ** : **24.07.2024**

**ಉತ್ತರಿಸಬೇಕಾದ ಸಚಿವರು** : **ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು.**

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಯಚೂರು ಜಿಲ್ಲೆ ಲಿಂಗಸಗೂರು ತಾಲ್ಲೂಕಿನ ಹಟ್ಟಿ ಮತ್ತು ನಾಗರಹಾಳ ಪಟ್ಟಣದಲ್ಲಿ ಹೈನುಗಾರಿಕೆ ಅಭಿವೃದ್ಧಿಯಾಗದೇ ಸುತ್ತಲಿನ 10 ಗ್ರಾಮ ಪಂಚಾಯಿತಿಯ ರೈತರು ಹೈನುಗಾರಿಕೆಯ ಮಾಹಿತಿ ಕೊರತೆಯಿಂದ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ನಾಗರಾಳ ಗ್ರಾಮದಲ್ಲಿ ಪ್ರಸ್ತುತ ಪಶುಚಿಕಿತ್ಸಾಲಯ ಕಾರ್ಯನಿರ್ವಹಿಸುತ್ತಿದ್ದು, 2023-24 ನೇ ಸಾಲಿನಲ್ಲಿ ಒಟ್ಟು 539 ಕೃತಕ ಗರ್ಭಧಾರಣೆ, 360 ಗರ್ಭತಪಾಸಣೆ ಹಾಗೂ 4,552 ಜಾನುವಾರುಗಳಿಗೆ ಕಾಲುಬಾಯಿ ಜ್ವರದ ಲಸಿಕೆ, 960 ಗಂಟಲು ಬೇನೆ ಲಸಿಕೆ, 15,586 ಕರಳು ಬೇನೆ ಲಸಿಕೆ, 158 ಕಂದು ರೋಗ ಲಸಿಕೆ, 3,171 ಚರ್ಮಗಂಟು ರೋಗದ ಲಸಿಕೆ ಹಾಕಲಾಗಿದೆ.<br><br>ಹಟ್ಟಿ ಪಟ್ಟಣದಲ್ಲಿ ಪಶುಚಿಕಿತ್ಸಾಲಯ ಇರುವುದಿಲ್ಲ. ಹಟ್ಟಿ ಪಟ್ಟಣವು ಗೆಜ್ಜಲಘಟ್ಟ ಪಶುಚಿಕಿತ್ಸಾಲಯ ವ್ಯಾಪ್ತಿಯಲ್ಲಿ ಬರುತ್ತಿದ್ದು, ಸುತ್ತಮುತ್ತಲಿನ ಒಟ್ಟು ಗ್ರಾಮಗಳಲ್ಲಿ 2023-24 ನೇ ಸಾಲಿನಲ್ಲಿ ಒಟ್ಟು 539 ಕೃತಕ ಗರ್ಭಧಾರಣೆ, 360 ಗರ್ಭತಪಾಸಣೆ ಹಾಗೂ 3,457 ಜಾನುವಾರುಗಳಿಗೆ ಕಾಲುಬಾಯಿ ಜ್ವರದ ಲಸಿಕೆ, 7,974 ಕರಳು ಬೇನೆ ಲಸಿಕೆ, 141 ಕಂದು ರೋಗ ಲಸಿಕೆ, 2,476 ಚರ್ಮಗಂಟು ರೋಗದ ಲಸಿಕೆ ಹಾಕಲಾಗಿದೆ<br><br>ಇಲಾಖಾ ವತಿಯಿಂದ ಹಟ್ಟಿ ಮತ್ತು ನಾಗರಾಳ ಪಟ್ಟಣಗಳಲ್ಲಿ ಗ್ರಾಮ ಸಂದರ್ಶನ ಹಾಗೂ ಗ್ರಾಮ ಸಭೆ ಮುಖಾಂತರ ಪಶು ಸಂಗೋಪನೆ ಮತ್ತು ಹೈನುಗಾರಿಕೆ ಸಂಬಂಧ ವೈಜ್ಞಾನಿಕ ಮಾಹಿತಿ ನೀಡಲಾಗಿರುತ್ತದೆ. ಇದರಿಂದಾಗಿ ರೈತರಿಗೆ ಹೈನುಗಾರಿಕೆ ಮಾಹಿತಿ ಕೊರತೆ ಕಂಡು ಬಂದಿರುವುದಿಲ್ಲ. |
| ಆ | ಬಂದಿದ್ದಲ್ಲಿ, ಹಟ್ಟಿ ಮತ್ತು ನಾಗರಹಾಳ ಪಟ್ಟಣದಲ್ಲಿ ಹೊಸದಾಗಿ ಪಶು ಆಸ್ಪತ್ರೆಯನ್ನು ಯಾವಾಗ ಮಂಜೂರು ಮಾಡಲಾಗುವುದು ಹಾಗೂ ಸೂಕ್ತ ಸಿಬ್ಬಂದಿಗಳನ್ನು ಯಾವಾಗ ಒದಗಿಸಲಾಗುವುದು? | ನಾಗರಾಳ ಗ್ರಾಮದಲ್ಲಿ ಪ್ರಸ್ತುತ ಪಶುಚಿಕಿತ್ಸಾಲಯ ಕಾರ್ಯನಿರ್ವಹಿಸುತ್ತಿದೆ. ನಾಗರಾಳ ಪಶು ಚಿಕಿತ್ಸಾಲಯದಲ್ಲಿ 1 ಪಶುವೈದ್ಯಾಧಿಕಾರಿ, 1 ಪಶುವೈದ್ಯಕೀಯ ಪರೀಕ್ಷಕರು, 2 'ಡಿ' ದರ್ಜೆ ನೌಕರರ ಹುದ್ದೆಗಳು ಮಂಜೂರು ಇದ್ದು, ಪ್ರಸ್ತುತ 1 ಪಶು ವೈದ್ಯಕೀಯ ಪರೀಕ್ಷಕರು ಮಾತ್ರ ಕಾರ್ಯ ನಿರ್ವಹಿಸುತ್ತಿದ್ದಾರೆ.<br><br>ಹಟ್ಟಿ ಪಟ್ಟಣದಲ್ಲಿ ಹೊಸದಾಗಿ ಪಶುಚಿಕಿತ್ಸಾಲಯ ತೆರೆಯುವ ಕುರಿತು ಪ್ರಸ್ತಾವನೆ ಸ್ವೀಕೃತವಾಗಿದ್ದು, ಪರಿಶೀಲಿಸಲನೆಯಲ್ಲಿದೆ. |

**ಇ- ಪಸಂಮೀ 133 ಸಲೆವಿ 2024**

(ಕೆ. ವೆಂಕಟೇಶ್)

**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**